ದಿನಾಂಕ : 1 ನೇ ಜೂನ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ.</u>

ಪ್ರತಿವಾದಿ ವತ್ಸಲ ನಾರಾಯಣ್ ಹಾಗೂ ಗುಂಡೂರಾವ್ ರವರ ನಡುವೆ ದಿನಾಂಕ 30.04.1996 ರ ಕ್ರಯಪತ್ರ ಹೊರತುಪಡಿಸಿ ಬೇರೆ ಯಾವುದೇ ಕ್ರಯಪತ್ರ ಆಗಿರುವುದಿಲ್ಲ ಹಾಗೂ ದಿನಾಂಕ 30.04.1996 ರ ಕ್ರಯಪತ್ರವೂ ಸಹ ನಕಲಿ ಕ್ರಯಪತ್ರ ಎನ್ನುತ್ತಾರೆ . ನಿ ಡಿ 1 ರಲ್ಲಿ ದಿನಾಂಕ 03.04.1996 ಎಂದು ತಪ್ಪಾಗಿ ನಮೂದಾಗಿದೆ ಅದು ದಿನಾಂಕ 30.04.1996 ಆಗಬೇಕಾಗಿತ್ತು ಎಂದರೆ ಸರಿ. ಗುಂಡೂರಾವ್ ರವರ ಮಕ್ಕಳಾದ ಲಕ್ಷ್ಮಿ ನರಸಿಂಹ ಹಾಗೂ ಹೆಚ್ ಜೆ ಜಗದೀಶ್ ರವರು ಈಗಲೂ ಮೈಸೂರಿನಲ್ಲಿ ವಾಸವಿದ್ದಾರೆ ಎನ್ನುತ್ತಾರೆ. ನಾನು ಹೇಳಿದಂತೆ 2015 ರಲ್ಲಿ ಗುಂಡೂರಾವ್ ರವರು ನನಗೆ ಯಾವುದೇ ಕರಾರು ಪತ್ರ ಮಾಡಿಕೊಟ್ಟಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕರಾರಿನಂತೆ ಯಾವುದೇ ಹಣವನ್ನು ಸಹ ಗುಂಡೂರಾವ್ ರವರಿಗೆ ನೀಡಿಲ್ಲ ಎಂದರೆ ಸರಿಯಲ್ಲ.

2014 ರಲ್ಲಿ ನನಗೆ ದಿನಾಂಕ 30.04.1996 ರ ಕ್ರಯಪತ್ರದ ಬಗ್ಗೆ ತಿಳಿಯಿತು ನನಗೆ ದಿನಾಂಕ 30.04.1996 ಕ್ರಯಪತ್ರದ ಬಗ್ಗೆ 2014 ಕ್ಕಿಂತ ಮೊದಲೇ ತಿಳಿದಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬದ್ರಿ ನಾರಾಯಣ್ ರವರ ಆಸ್ತಿ ಲಪಟಾಯಿಸಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವ ಮೊದಲು ನಾನು ನಿಪಿ 2 ಕ್ರಯಪತ್ರದ ಬಗ್ಗೆ ಯಾವುದೇ ಮಾತುಕತೆ ಮಾಡಿರುವುದಿಲ್ಲ ಎನ್ನುತ್ತಾರೆ. ಈ ದಾವೆ ಸುಳ್ಳು ಮಾಹಿತಿಯಿಂದ ಕೂಡಿರುವ ಕಾರಣ ನಾನು ಯಾವುದೇ ಪರಿಹಾರಕ್ಕೆ ಬದ್ಧನಲ್ಲ ಎಂದರೆ ಸರಿಯಲ್ಲ. ಕ್ರಯಪತ್ರದಲ್ಲಿ ಸಹಿ ಸೃಷ್ಟಿಸಿದ್ದಾರೆ ಎಂದು ತಿಳಿದ ನಂತರವೇ ನಾವು ಈ ದಾವೆ ಹಾಕಿದ್ದೇವೆ ಎನ್ನುತ್ತಾರೆ.

<u>ಮರು ವಿಚಾರಣೆ :-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.